(ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ರೆಡ್ಡಿ ದೇಶಮುಖ್ ಮದನಾರವರು)
ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು)

ಪ್ರಕಟಣೆ

ಉಪಾಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮ 118ರ ಮೇರೆಗೆ ದಿನಾಂಕ 8.7.1999ರಂದು ವಿಧಾನ ಪರಿಷತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 1998ನ್ನು ಯಾವುದೇ ತಿದ್ದುಪಡಿಯಿಲ್ಲದೇ ಅಂಗೀಕರಿಸಿದೆ ಎಂದು ಈ ಮೂಲಕ ತಿಳಿಸಲಾಗಿದೆ".

ವಿತ್ತೀಯ ಕಲಾಪಗಳು

ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೇ, ಆಡಳಿತ ಪಕ್ಷದ ಕಡೆ ಯಾವ ಸದಸ್ಯರೂ ಇಲ್ಲ, ಮಂತ್ರಿಗಳೂ ಕೂಡ ಇಲ್ಲ. ನಾನು ಯಾರಿಗೆಂದು ಭಾಷಣ ಮಾಡಲಿ? ನೀವು ಮತ್ತು ನಾನು ಮಾತನಾಡುವುದಿದ್ದರೆ ಛೇಂಬರ್‌ನಲ್ಲಿ ಕುಳಿತುಕೊಂಡು ಮಾತನಾಡೋಣ. ಈಗ ನಾನು ಲಾ ಅಂಡ್ ಆರ್ಡರ್ ಬಗ್ಗೆ ಮಾತನಾಡಬೇಕೆಂದಿದ್ದೆ.....

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು, ಮಾನ್ಯ ಸದಸ್ಯರುಗಳು ಮತ್ತು ಎಲ್ಲಾ ಅಧಿಕಾರಿಗಳು ಬರುವವರೆಗೆ ಈ ಹೌಸ್ ಅನ್ನು ಸ್ವಲ್ಪ ಕಾಲ ಅಡ್ಜರ್ನ್ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ನೀವು ಮಾತನಾಡಿ ಎಂದರೆ ನಾನು ಮಾತನಾಡುತ್ತೇನೆ. ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಈ ರೀತಿ ಆಗುತ್ತಿದೆ. ಇದು ಬಹಳ ಅತಿಯಾಯಿತು. ಒಬ್ಬ ಮನುಷ್ಯನಿಗೆ ಎಷ್ಟು ಸಲ ತಿಳಿ ಹೇಳಲು ಸಾಧ್ಯ? ನಾವೇನು ಖಾಲಿ ಕುರ್ಚಿಗಳನ್ನು ಉದ್ದೇಶಿಸಿ ಇಲ್ಲಿ ಮಾತನಾಡಬೇಕೇ? ಅದಕ್ಕಾಗಿಯೇ ನಾನು ಹಿಂದೆಯೇ ಹೇಳಿದೆ, ಈ ಸದನದಲ್ಲಿ ನಾವು ಚರ್ಚೆ ನಡೆಸುವುದು ಬೇಡ, ಸದನ ಮುಂದೂಡಿ, ಗಿಲಟೀನ್‌ಗೆ ಹಾಕಿ ಬೇಡಿಕೆಗಳನ್ನು ಪಾಸ್ ಮಾಡಿಬಿಡಿ ಎಂದು. ನಾವು ಹೀಗೆ ಹೇಳಿದರೂ ಕೂಡ ಮತ್ತೆರಡು ದಿವಸ ಅಧಿವೇಶನ ಮುಂದುವರೆಸಿದ್ದೀರಿ.

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಎರಡು ದಿವಸಗಳ ಕಾಲ ಅಧಿವೇಶನದ ಅವಧಿಯನ್ನು ಎಕ್ಸ್‌ಟೆನ್‌ಷನ್ ಮಾಡಿಸಿದ್ದಕ್ಕೆ ನಾನೇ ಕ್ಷಮೆ ಕೇಳಬೇಕಾಗಿದೆ. ಎಲ್ಲರೂ ಬೇಡ ಎಂದರೂ ನಾನು ಒತ್ತಾಯಪಡಿಸಿ ಅಧಿವೇಶನ ಮತ್ತೆರಡು ದಿನ ಎಕ್ಸ್‌ಟೆಂಡ್ ಆಗುವಂತೆ ಮಾಡಿದೆ. ಈಗ ಒಂದು ಕೆಲಸ ಮಾಡಿ, ಗಿಲಟೀನ್‌ಗೆ ಹಾಕಿಬಿಡಿ, ಬೇಡಿಕೆಗಳನ್ನು ಪಾಸ್ ಮಾಡಿಸಿ ನಾವೆಲ್ಲಾ ಹೊರಟು ಹೋಗೋಣ. ವಿಧೇಯಕಗಳನ್ನು ಯಾವಾಗಲಾದರೂ ಪಾಸ್ ಮಾಡಿಕೊಳ್ಳಬಹುದು.